# ಚುನಾವಣೆಗೆ ಇಂಡಿಯನ್



ಕಮಲಹಾಸನ್ ಮತ್ತು ನಿರ್ದೇಶಕ ಶಂಕರ್ ಜೋಡಿಯ 'ಇಂಡಿಯನ್2' ಮೊದಲ ಹಂತದ ಶೂಟಿಂಗ್ ಚೆನ್ನೈನಲ್ಲಿ ಮುಗಿಸಿದೆ. ಈಗ ಎರಡನೇ ಹಂತದ ಚಿತ್ರೀಕರಣ ಆಂಧ್ರಪ್ರದೇಶದಲ್ಲಿ ಮುಂದುವರಿಯಲಿದೆ. ಚೆನ್ನೈನಲ್ಲಿ ಕೆಲವು ಸಾಹಸ ದೃಶ್ಯಗಳಲ್ಲಿ ರಕುಲ್‌ಪ್ರೀತ್ ಸಿಂಗ್ ಮತ್ತು ಸಿದ್ಧಾರ್ಥ್ ಕೂಡಾ ಭಾಗವಹಿಸಿದ್ದರು. ಶಂಕರ್ ಅವರ ಬಹುತೇಕ ಸಿನಿಮಾಗಳ ಸ್ಟಂಟ್ ನಿರ್ದೇಶಕ ಪೀಟರ್ ಹೈನ್ ಈ ಸಿನಿಮಾಕ್ಕೂ ಸಾಹಸ ಸಂಯೋಜನೆ ಮಾಡಿದ್ದಾರೆ. ಆಂಧ್ರದ ವಿವಿಧ ಭಾಗಗಳಲ್ಲೂ ಹೆಚ್ಚಿನ ಸ್ಟಂಟ್ ದೃಶ್ಯಗಳಿವೆಯಂತೆ. ಆ ಬಳಿಕ ವಿದೇಶದಲ್ಲಿ ಶೂಟಿಂಗ್.

ಸದ್ಯಕ್ಕೆ ತಮಿಳಿನ ಟಿವಿ ಷೋ 'ಬಿಗ್ ಬಾಸ್ 3' ಯಶಸ್ವಿಯಾಗಿ ನಡೆದಿದೆ. ಕಮಲ್‌ಗೆ ಈ ಷೋ ಹೊಸ ಪ್ರೇಕ್ಷಕ ವಲಯವನ್ನೂ ಸೃಷ್ಟಿಸಿದೆ. 'ಇಂಡಿಯನ್2' ಸಿನಿಮಾ ರಾಜಕಾರಣಿಗಳ ಭ್ರಷ್ಟಾಚಾರದ ವಿರುದ್ಧ ಮಾಜಿ ಸೈನಿಕನೊಬ್ಬನ ಹೋರಾಟದ ಕಥೆ ಹೊಂದಿದೆ. ಈ ಸಿನಿಮಾ 2021ರಲ್ಲಿ ಬಿಡುಗಡೆ ಆಗಲಿದೆಯಂತೆ. ಅದೇ ಹೊತ್ತಿಗೆ ತಮಿಳುನಾಡಿನ ವಿಧಾನಸಭಾ ಚುನಾವಣೆ ನಡೆಯಲಿದೆ ಎನ್ನುವುದು ಕಾಕತಾಳೀಯವಂತೂ ಅಲ್ಲ. ಕಮಲ್ ತನ್ನ ರಾಜಕೀಯ ಪಕ್ಷಕ್ಕೆ ಈ ಸಿನಿಮಾ ಖಂಡಿತ ನೆರವಾಗಲಿದೆ ಎಂಬ ಆಸೆಯನ್ನೂ ಇಟ್ಟುಕೊಂಡಿದ್ದಾರೆ. ■

# ಯೂಟ್ಯೂಬ್‌ನಲ್ಲಿ ದಿಶಾ

ಬಾಲಿವುಡ್ ತಾರೆಯರಿಗೆ ತಮ್ಮದೇ ಸ್ವಂತ ಯೂಟ್ಯೂಬ್ ಚಾನೆಲ್ ಹೊಂದುವುದೀಗ ಚಟ ಆದಂತಿದೆ. ಆಲಿಯಾ ಭಟ್ ಸ್ವಂತ ಯೂಟ್ಯೂಬ್ ಚಾನೆಲ್ ಹೊಂದಿ ಜನಪ್ರಿಯತೆ ಹೆಚ್ಚಿಸಿಕೊಂಡಿದ್ದಾಳೆ. ಅವಳ ಬೆನ್ನಲ್ಲೇ ಜಾಕ್ವೆಲಿನ್ ಫೆರ್ನಾಂಡಿಸ್ ಯೂಟ್ಯೂಬ್ ಚಾನೆಲ್ ಶುರುವಾಯಿತು. ಈಗ ದಿಶಾ ಪಟಾನಿ ಸರದಿ. ಸಲ್ಮಾನ್ ಜೊತೆಗೆ ಈಕೆ ನಟಿಸಿದ 'ಭಾರತ್' ಚಿತ್ರ 200 ಕೋಟಿ ಕಲೆಕ್ಷನ್ ಮಾಡಿದ ಬಳಿಕ ಈಕೆಯ ಅಭಿಮಾನಿಗಳ ಸಂಖ್ಯೆಯೂ ಏರಿದೆ. ಪ್ರತಿನಿತ್ಯದ ತನ್ನ ಚಟುವಟಿಕೆಗಳನ್ನೆಲ್ಲ ಯೂಟ್ಯೂಬ್‌ನಲ್ಲಿ ದಾಖಲಿಸುತ್ತಿದ್ದಾಳೆ ದಿಶಾ. ಈ ಮಧ್ಯೆ ಈಕೆ ನಟಿಸಿದ 'ಮಲಾಂಗ್' ಚಿತ್ರವೂ ಬಿಡುಗಡೆಗೆ ಸಿದ್ಧವಾಗುತ್ತಿದೆ.

■ ಬಿಂದು



# ಶಾರೂಕನ ಮಗ

ಆರ್ಯನ್ ಖಾನ್‌ನನ್ನು ನೋಡಿದರೆ ಡಿಟ್ಟೋ ಅವರಪ್ಪ ಶಾರೂಕ್ ಖಾನ್‌ನನ್ನೇ ನೋಡಿದಂತಾಗುತ್ತದಂತೆ! ಹಾಗೆಂದು ಇನ್‌ಸ್ಟಾಗ್ರಾಮ್‌ನಲ್ಲಿ ಆರ್ಯನ್‌ನ ಇತ್ತೀಚಿನ ಒಂದು ಫೋಟೊ ನೋಡಿದವರು ಮುಕ್ತಕಂಠದಿಂದ ಹೊಗಳುತ್ತಿದ್ದಾರೆ. ಕಳೆದ ವಾರ ಆರ್ಯನ್ ಅಪರೂಪಕ್ಕೆ ತನ್ನ ಫೋಟೊ ಒಂದನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿದ್ದಾನೆ. ಡಾರ್ಕ್ ಕಲರ್ ಶರ್ಟ್, ಲೈಟ್ ಕಲರ್ ಪ್ಯಾಂಟ್‌ನಲ್ಲಿ, ಮೊಣಕಾಲಿನ ಮೇಲೆ ಕೈಇಟ್ಟು ಕೂಲಿಂಗ್ ಗ್ಲಾಸ್ ಹಾಕಿಕೊಂಡು ಕುರ್ಚಿ ಮೇಲೆ ಕುಳಿತಿರುವ ಈ ಫೋಟೊ ನೋಡಿ ಅಭಿಮಾನಿಗಳು ಫಿದಾ ಆಗಿದ್ದಾರೆ. ಒಬ್ಬಾಕೆ, ನನ್ನನ್ನು ಮದುವೆ ಆಗುವೆಯಾ ಎಂದು ದುಂಬಾಲು ಬಿದ್ದರೆ, ಇನ್ನೊಬ್ಬ 'ಶಾರೂಕ್‌ನದ್ದೇ ಫೋಟೊ ಇದು ಎಂದುಕೊಂಡಿದ್ದೆ' ಎಂದಿದ್ದಾನೆ.

ಆರ್ಯನ್ ಖಾನ್‌ನ ಈ ಲುಕ್ ಬಾಲಿವುಡ್‌ನ ಹೀರೋಗಳಂತೆಯೇ ಇದೆ. ಆದರೆ ಆತನಿಗೆ ನಟನೆಯಲ್ಲಿ ಆಸಕ್ತಿ ಇಲ್ಲವಂತೆ. ಬಾಲಿವುಡ್‌ನ ಖ್ಯಾತ ಕ್ಯಾಮರಾಮನ್ ರವಿವರ್ಮನ್ ಜೊತೆಗೆ ಛಾಯಾಗ್ರಹಣ ಕಲಿತಿರುವ ಆತ, ಈಗ ಅಮೆರಿಕದಲ್ಲಿ ಸಿನಿಮಾ ನಿರ್ಮಾಣದ ತಂತ್ರಗಳನ್ನು ಕಲಿಯುತ್ತಿದ್ದಾನೆ. 'ಮಕ್ಕಳಿಗೆ ಏನು ಬೇಕೋ ಅದಾಗಲಿ. ಮಗ ಬಾಲಿವುಡ್‌ಗೆ ಬಂದರೆ ಮತ್ತೆ ನಾನು ಮಾಡಿದ್ದನ್ನೇ ಮಾಡುವುದು ನನಗೆ ಇಷ್ಟವಿಲ್ಲ, ಏನಾದರೂ ಹೊಸತನ್ನು ಮಾಡುವ ಸಾಮರ್ಥ್ಯ ಇದ್ದರೆ ಮಾತ್ರ ಇಲ್ಲಿಗೆ ಬರಲಿ. ನನ್ನದೇ ಇನ್ನೊಂದು ಡುಪ್ಲಿಕೇಟ್‌ನ ಅಗತ್ಯ ಇಲ್ಲಿಲ್ಲ' ಎಂದಿದ್ದಾನೆ ಶಾರೂಕ್. ಇತ್ತೀಚೆಗೆ ಅಪ್ಪ ಮಗ ಇಬ್ಬರೂ ಸೇರಿ ಡಿಸ್ನಿ ಕಂಪನಿಯ 'ದಿ ಲಯನ್ ಕಿಂಗ್'ಗೆ ಡಬ್ಬಿಂಗ್ ಮಾಡಿರೋದು ವಿಶೇಷ. ಮುಫಾಸಾಗೆ ಶಾರೂಕ್ ಧ್ವನಿ ನೀಡಿದ್ದರೆ, ಸಿಂಬನಿಗೆ ಆರ್ಯನ್ ಧ್ವನಿ ನೀಡಿದ್ದಾನೆ. ■

